**ಸಾಕ್ಷಿಯನ್ನು ದಿಃ 10.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತದ ಬಗ್ಗೆ ಮೊದಲಿಗೆ ಯಾರು ದೂರು ನೀಡಿದ್ದಾರೆ ಎಂದರೆ ಸಾಕ್ಷಿ ಎದುರುದಾರರಾದ ಪ್ರಜ್ವಲ್ ನೀಡಿದ್ದಾರೆ ಎನ್ನುತ್ತಾರೆ. ಸದರಿ ದೂರನ್ನು ನಾನು ಓದಿಲ್ಲ. ಮೊದಲಿಗೆ ಪಾಂಡವಪುರ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೇನೆ. ನಂತರ ಕೆ.ಆರ್ ಆಸ್ಪತ್ರೆಗೆ ಹೋಗಿದ್ದೇನೆ. ಆನಂತರ ಅನ್ನಪೂರ್ಣ ಆಸ್ಪತ್ರೆಗೆ ದಾಖಲಾಗಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದೇನೆ. ಕೆ.ಆರ್ ಆಸ್ಪತ್ರೆ ಹಾಗೂ ಪಾಂಡವಪುರ ಆಸ್ಪತ್ರೆಯ ದಾಖಲೆಗಳನ್ನು ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಕೇಳಿ ನೋಡುತ್ತೇನೆ ಎನ್ನುತ್ತಾರೆ. ನನಗೆ ಪಾಂಡವಪುರ ಆಸ್ಪತ್ರೆಯಲ್ಲಿ ಪ್ರಜ್ಞೆ ಬಂದಿದ್ದು ಆನಂತರ ಕೆ.ಆರ್ ಆಸ್ಪತ್ರೆಯಲ್ಲಿ ಒಂದು ದಿನ ದಾಖಲಾಗಿದ್ದೆ, ಆನಂತರ ಬುಧವಾರ ಕೆ.ಆರ್ ಆಸ್ಪತ್ರೆಗೆ ಹೋಗಿ ಒಳರೋಗಿಯಾಗಿ ದಾಖಲಾಗಿದ್ದೇನೆ. ನಂತರ ಶನಿವಾರ ಬಿಡುಗಡೆಗೊಳಿಸಿಕೊಂಡು ಮನೆಗೆ ಹೋಗಿ ನಾಲ್ಕು ದಿನದ ನಂತರ ಅನ್ನಪೂರ್ಣ ಆಸ್ಪತ್ರೆಗೆ ದಾಖಲಾಗಿದ್ದೇನೆ. ಕೆ.ಆರ್ ಆಸ್ಪತ್ರೆಯಲ್ಲಿ ಡಾ. ಚೇತನ್ ಎನ್ನುವವರು ನಾನು ದಾಖಲಾದ ವಾರ ಹೆಚ್ಚು ಕೆಲಸವಿರುವ ಕಾರಣ ಆಗುವುದಿಲ್ಲ ಎಂದು ಹೇಳಿದ್ದು, ಅದರ ಮುಂದಿನ ಶುಕ್ರವಾರ ಗುಡ್ ಫ್ರೈಡೆ ಆದ ಕಾರಣ ಶಸ್ತ್ರ ಚಿಕಿತ್ಸೆ ಮಾಡಲು ಆಗುವುದಿಲ್ಲ ಎಂದಿದ್ದಾರೆ. ಅಪಘಾತ ನನಗೆ 3 ನೇ ತಾರೀಖು ಆಗಿದೆ. ಅನ್ನಪೂರ್ಣ ಆಸ್ಪತ್ರೆಗೆ ದಿಃ 25.04.2025 ಕ್ಕೆ ಸೇರಿದ್ದೇನೆ. ಅಲ್ಲಿ ಡಾ. ಮಹೇಶ್ ಎನ್ನುವವರು ಚಿಕಿತ್ಸೆ ನೀಡಿದ್ದಾರೆ. ಅನ್ನಪೂರ್ಣ ಆಸ್ಪತ್ರೆಯ ದಾಖಲೆಯನ್ನು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ಪತ್ರೆಯ ಬಿಲ್ಲು ಹಾಗೂ ಡಿಸ್ ಚಾರ್ಜ್ ಸಮ್ಮರಿಗಳಲ್ಲಿ ಬೇರೆ ಬೇರೆ ದಿನಾಂಕ ನಮೂದಿಸಿದ್ದಾರೆ ಎಂದರೆ ಸರಿಯಲ್ಲ.

2. ಅನ್ನಪೂರ್ಣ ಆಸ್ಪತ್ರೆಯಲ್ಲಿ ನನ್ನ ಬೈಕ್ ಗೆ ಎರಡು ಅನೌನ್ ಮೋಟಾರ್ ಸೈಕಲ್ ಡಿಕ್ಕಿ ಪಡಿಸಿರುವುದಾಗಿ ಹೇಳಿರುತ್ತೇನೆ ಎಂದರೆ ಸರಿ. ಆ ಎರಡು ಮೋಟಾರ್ ಸೈಕಲ್ ನಂಬರ್ ಕೆಎ-11-ಇಎಂ-9143 ಮತ್ತು ಕೆಎ-11-ಇವಿ-0630 ಎಂದು ಹೇಳಿದ್ದೇನೆ ಎಂದರೆ ಸರಿ. ಪೋಲೀಸರಿಗೆ ನಾನು ಡಿಸ್ ಚಾರ್ಜ್ ಸಮ್ಮರಿಯಲ್ಲಿ ಬರೆದ ರೀತಿಯಲ್ಲಿ ಅಪಘಾತ ಆಗಿದೆ ಎಂದು ಹೇಳಿರುತ್ತೇನೆ. ನಾವು ಮೂವರು ಬೈಕ್ ನಲ್ಲಿ ಹೋಗುತ್ತಿದ್ದೇವು. ನಮ್ಮ ಮೋಟಾರ್ ಸೈಕಲ್ ಅನ್ನು

ರವಿ ಚಲಾಯಿಸುತ್ತಿದ್ದರು. ಮಧ್ಯದಲ್ಲಿ ಶಂಭುರವರು ಕುಳಿತಿದ್ದು ಅವರ ನಂತರ ನಾನು ಕುಳಿತಿದ್ದೆ. ಬೈಕ್ ನಲ್ಲಿ 3 ಜನ ಹೋಗಬಾರದು ಎಂದು ನನಗೆ ಗೊತ್ತಿದೆ. ಆಗಿದ್ದರೂ ಸಹ ಮೂವರು ಹೋಗಿದ್ದೀರಿ ಎಂದರೆ ಸಾಕ್ಷಿಯು ಮೊದಲಿಗೆ ನಾನು ಮತ್ತು ರವಿ ಮಾತ್ರ ಹೋಗಿದ್ದು ಬರುವಾಗ ಶಂಭುರವರು ತಲೆನೋವು ಎಂದು ಹೇಳಿದ ಕಾರಣ ಕರೆದುಕೊಂಡು ಬಂದಿದ್ದೇವೆ ಎನ್ನುತ್ತಾರೆ. ಇದನ್ನು ಮೊದಲ ಬಾರಿಗೆ ಈ ದಿನ ಹೇಳುತ್ತಿದ್ದೇವೆ ಎಂದರೆ ಸರಿ. ಪೋಲೀಸರು ನನ್ನ ವಿಚಾರಣೆ ಮಾಡುವಾಗ ಈ ವಿಚಾರ ಹೇಳಲು ತೊಂದರೆ ಇರಲಿಲ್ಲ. ಮೂವರು ಬೈಕ್ ನಲ್ಲಿ ಹೋಗುವುದು ತಪ್ಪು ಎಂದು ಗೊತ್ತಿದ್ದರೂ ಅದನ್ನು ಮರೆಮಾಚಲು ಮೇಲಿನಂತೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಪಾಂಡವಪುರ ಆಸ್ಪತ್ರೆಗೆ ಹಾಗೂ ಅಲ್ಲಿಂದ ಆಂಬೂಲೆನ್ಸ್‌ನಲ್ಲಿ ಕೆ.ಆರ್ ಆಸ್ಪತ್ರೆಗೆ ಯಾರು ಕರೆದುಕೊಂಡು ಬಂದಿದ್ದಾರೆ ಎಂದು ಗೊತ್ತಿಲ್ಲ. ಮನೆಯವರು ಅನ್ನಪೂರ್ಣ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ನನಗೆ ಕಾಲಿಗೆ ಪೆಟ್ಟಾಗಿದ್ದು ಶಸ್ತ್ರ ಚಿಕಿತ್ಸೆ ಆಗಿದೆ. ನನ್ನ ತಲೆಗೆ ಪೆಟ್ಟಾಗಿಲ್ಲ ಎಂದರೆ ಸರಿ. ನನಗೆ ಪ್ರಜ್ಞೆ ಇರಲಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರವಿಗೆ ಚಾಲನ ಪರವಾನಗಿ ಇರಲಿಲ್ಲ, ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾಖಲೆಯನ್ನು ನೋಡಿ ಅರ್ಜಿ ಸಲ್ಲಿಸಿದ್ದೇನೆ. ಪೋಲೀಸರು ರವಿಯ ಮೇಲೆ ದೋಷರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸರಿ. ವಾಹನಕ್ಕೆ ವಿಮೆ ಇಲ್ಲ ಎಂದು ಅವರ ಮೇಲೆ ಪ್ರಕರಣ ಹೂಡಿದ್ದಾರೆ ಎಂದರೆ ಸರಿ.

4. ಮೊದಲಿಗೆ ಹೋಂಡಾ ಶೈನ್ ಬೈಕ್ ನಂಬರ್ 9143 ಬೈಕ್ ನಮ್ಮ ವಾಹನಕ್ಕೆ ಡಿಕ್ಕಿ ಪಡಿಸಿರುತ್ತದೆ. ನಂತರ ಮತ್ತೊಂದು ಮೋಟಾರ್ ಸೈಕಲ್ ಡಿಕ್ಕಿ ಪಡಿಸಿದೆ. ಅದರ ನಂಬರ್ ಕೆಎ-11-ಇಬಿ-0630 ಎಂದರೆ ಸರಿ. ಈ ಎರಡು ವಾಹನಗಳು ನಮ್ಮ ಬೈಕ್ ನ ಮುಂಭಾಗಕ್ಕೆ ಡಿಕ್ಕಿ ಪಡಿಸಿದೆ. ಮೊದಲ ಬೈಕ್ ಡಿಕ್ಕಿ ಪಡಿಸಿದಾಗ ನಾವು ಬಿದ್ದಿದ್ದು ನಂತರ ಮತ್ತೊಂದು ಬೈಕ್ ಸಹ ಡಿಕ್ಕಿ ಪಡಿಸಿತು ಎನ್ನುತ್ತಾರೆ. ನಾನು ಹೇಳಿದಂತೆ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ರವಿ ತ್ರಿಪಲ್ ರೈಡ್ ಮಾಡಿ ಪ್ರಜ್ವಲ್ ನ ಮೋಟಾರ್ ಸೈಕಲ್ ಗೆ ಡಿಕ್ಕಿ ಪಡಿಸಿ ನಂತರ ಮತ್ತೊಂದು ಬೈಕ್ ಗೆ ಡಿಕ್ಕಿ ಪಡಿಸಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರಜ್ವಲ್ ದೂರು ನೀಡಿದ್ದಾರೆ ಎಂದರೆ ಸರಿ. ನಮ್ಮ

ವಾಹನಕ್ಕೆ ವಿಮೆ ಇಲ್ಲದ ಕಾರಣ ಪ್ರಜ್ವಲ್ ವಾಹನಕ್ಕೆ ವಿಮೆ ಇಲ್ಲದ ಕಾರಣ ಅವರ ವಾಹನವನ್ನು ಫಿಕ್ಸ್ ಮಾಡಿದ್ದಾರೆ ಎಂದರೆ ಸರಿಯಲ್ಲ.

5. ಅಪಘಾತದ ಆದ ಎರಡು ದಿನದ ನಂತರ ಠಾಣೆಗೆ ನನನ್ನು ಕರೆಯಿಸಿದ್ದಾರೆ. ನಾನು ಸ್ಥಳ ತೋರಿಸಿದ್ದೇನೆ. ನಾನು ಸ್ಥಳಕ್ಕೆ ಹಾಗೂ ಠಾಣೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಪ್ರಜ್ವಲ್ ತಪ್ಪು ಮಾಡದೇ ಇದ್ದರೂ ಸಹ ಪರಿಹಾರಕ್ಕಾಗಿ ಅವನನ್ನು ಅಪರಾಧಿಯನ್ನಾಗಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾವು ಮೂವರು ಒಂದೇ ಕಡೆ ಕೆಲಸ ಮಾಡುತ್ತೇವೆ ಎಂದರೆ ಸರಿಯಲ್ಲ. ನಾನು ಕಿಚನ್ ಟ್ರೇಡರ್ಸ್ ಎಂಬ ಏಜೆನ್ಸಿಯಲ್ಲಿ ಸೇಲ್ಸ್ ಮ್ಯಾನ್ ಆಗಿದ್ದೆ. ನನ್ನಲ್ಲಿ ಕೋಟಕ್ ಬ್ಯಾಂಕ್ ಖಾತೆ ಇದೆ. ನನಗೆ ನಗದಾಗಿ ಕೈಗೆ ಸಂಬಳ ಕೊಡುತ್ತಿದ್ದರು. ಈ ಬಗ್ಗೆ ಯಾವುದೇ ದಾಖಲೆ ಇಲ್ಲ. ನಾನು ಪ್ರಭು ಏಜೆನ್ಸಿ ಮುಖಾಂತರ ಕೆಲಸ ಮಾಡುತ್ತಿದ್ದೆ. ಏಜೆನ್ಸಿಯವರು ಒಪ್ಪಂದ ಮಾಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ನಾನು ಈಗಲೂ ಅಲ್ಲಿ ಕೆಲಸ ಮಾಡುತ್ತಿದ್ದರೂ ಪರಿಹಾರಕ್ಕಾಗಿ ನಾನು ಕೆಲಸ ಮಾಡುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವೈಧರು ಅಂಗನ್ಯೂನತೆ ಸರ್ಟೀಪಿಕೇಟ್ ನೀಡಿಲ್ಲ. ವೈಧರು ಮೆಡಿಕಲ್ ಸರ್ಟೀಫಿಕೇಟ್ ಕೊಟ್ಟಿದ್ದಾರೆ. ಕೆಲಸಕ್ಕೆ ಬರುವುದಿಲ್ಲ ಎಂದು ನಮ್ಮ ಏಜೆನ್ಸಿಯವರಿಗೆ ತಿಳಿಸಿದ್ದೇನೆ. ಅದನ್ನು ನ್ಯಾಯಾಲಯಕ್ಕೆ ಕೊಡಲು ನನ್ನ ಬಳಿ ಇಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವ ಹಾಗೆ ಪ್ರಜ್ವಲ್ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತ ರವಿಯ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ರವಿ ನಿದಾನವಾಗಿ ಚಲಾಯಿಸುತ್ತಿದ್ದರು ಎನ್ನುತ್ತಾರೆ. ಪೋಲೀಸರೊಂದಿಗೆ ಶಾಮಿಲಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.